## ಕತೆ

ಓ ಎಲ್ಲವನ್ನೂ ಹೊಂದಿರುವ ಅಗ್ನಿಯೇ... ಶರೀರಯುಕ್ತವಾದ ಈ ವ್ಯಕ್ತಿಯನ್ನು ನಿನಗೆ ಒಪ್ಪಿಸುತ್ತಿರುವೆ. ಸುಡಬೇಡ. ದಹಿಸಬೇಡ. ಸ್ವಾಹಾಗೈಯಬೇಡ. ಈ ದೇಹವನ್ನಿರಲಿ ಮೈಸುಕ್ಕನ್ನು ಸಹ ಮುರುಟಗೊಡದಿರು. ಇಕೋ... ಈ ಮೈ ನಿನ್ನೊಡಲಿನಲ್ಲಿ ಮಾಗಲಿ. ಮುಂದಿನದಕ್ಕೆ ಅಣಿಗೊಳ್ಳಲಿ.

(ಋಗ್ವೇದದಿಂದೊಂದು ಋಕ್ಕು)

'ಟ್ರೈಡ್ ಕಾಲಿಂಗ್ ಯು, ಸರ್... ಕುಡ್ ನಾಟ್ ಗೆಟ್ ಥ್ರೂ. ಮಿಸ್ಟರ್ ಸತ್ಪತಿ ವಾಂಟ್ಸ್ ಟು ಮೀಟ್ ಯು. ಪ್ಲೀಸ್ ಗೆಟ್ ಬ್ಯಾಕ್ ವೆನ್ ಯು ಸೀ ದಿಸ್ ಮೆಸೇಜ್...'

ಎದೆಯಲ್ಲಿ ಭಾರವನ್ನುಳಿಸಿಯೇ ಹುಟ್ಟಿದ ಹಗಲಿನಲ್ಲಿ, ನಾನು ಕಡು ಉದಾಸದಿಂದ ಎಚ್ಚೆತ್ತಾಗ ಹೀಗೊಂದು ಮೆಸೇಜು ಎದುರಾಯಿತು. ನನ್ನ ಕ್ಲಯಂಟು ಹಿಮಾದ್ರಿ ಸತ್ಪತಿಯ ಸೆಕ್ರೆಟರಿ ಕುಣಾಲ ಮೊಹಂತಿ ನಡುರಾತ್ರಿಯಲ್ಲಿ ಯಾವಾಗಲೋ ಕಳಿಸಿದ್ದು ಎಷ್ಟು ಹೊತ್ತಿಗೆ ಬಂದಿದ್ದೆಂದು ಒತ್ತಾಯದಿಂದ ಕಣ್ಣಗಲಿಸಿಕೊಂಡು ನೋಡಿದೆ. ರಾತ್ರಿ ಎರಡೂ ನಲವತ್ತೆಂದು ತೋರಿಬಂತು! ನಾಲ್ಕಾರು ಸರ್ತಿ ನನ್ನನ್ನು ಸಂಪರ್ಕಿಸಲು ಪ್ರಯತ್ನಿಸಿದ್ದನೆಂಬ ಪುರಾವೆಯೆಂಬಂತೆ ಅಷ್ಟೇ ನಾಲ್ಕಾರು ಮಿಸ್ಡ್‌ಕಾಲ್ ಅಲರ್ಟುಗಳೂ ನನ್ನ ಮೊಬೈಲಿನಲ್ಲಿದ್ದವು. ಅಲ್ಲದೆ, 'ಮಿಸ್ಟರ್ ಸತ್ಪತಿ ಇಂಟೆಂಡ್ಸ್ ಮೀಟಿಂಗ್ ಯು ಬಿಫೋರ್ ಯು ಲೀವ್... ಡು ಗೆಟ್ ಬ್ಯಾಕ್...' ಎಂದೊಂದು ಸಂದೇಶವೂ 'ವಾಟ್ಸ್‌ಆ್ಯಪ್'ನಲ್ಲಿ ಕಂಡುಬಂತು.

ಅಜೀಬನ್ನಿಸಿತು.

ಕಣ್ಣು ಮಂಜಾದಂತನಿಸಿದ್ದು ರಾತ್ರಿಯೆಲ್ಲ ನಿದ್ದೆಗೆಟ್ಟಿದ್ದಕ್ಕೋ, ನಿನ್ನೆಯ ದಿನಪೂರ್ತಿಯ ದಣಿವಿಗೋ, ಅಥವಾ, ಒಂದೇ ಸಮ ನುಗ್ಗಿ ಲಗ್ಗೆಯಿಟ್ಟು ಕಾಡಿದ ನೆನಪುಂಟಾಗಿಸಿದ ದುಗುಡದ ಮೇರೆಗೋ ಅರಿಯದಾದೆ. ಸೂರ್ಯನ ಸುತ್ತ ಸುತ್ತುವ ಭೂಮಿಯ ಹಾಗೆ, ನನ್ನ ಬದುಕು ತನ್ನ ಸುತ್ತಲೇ ತಾನು ಪರಿಭ್ರಮಿಸಿ ಮೊದಲಿದ್ದುದಲ್ಲಿಗೇ ಬಂದು ನಿಂತಂತನಿಸಿತು. ವರ್ಷವರ್ಷವೂ ವರ್ಷದ ಕೊನೆಯಲ್ಲಿ ಡಿಸೆಂಬರು ಬರುವ ಹಾಗೆ, ಡಿಸೆಂಬರೆಂದ ಮೇಲೆ ಕ್ರಿಸ್‌ಮಸ್ ಇದೆಯೆನ್ನುವ ಹಾಗೆ, ಹಾಗೇ ತುಸು ಹೊರಳಿ ನ್ಯೂಯಿಅರ್ ಹುಟ್ಟುವ ಹಾಗೆ... ಯಾರೋ ಬರೆದಿಟ್ಟ ಕಾರ್ಯಕ್ರಮವೆಂಬಂತೆ... ಎಲ್ಲವೂ ಅಂತಂತೆಯೇ ಜರುಗಿದೆಯಾದರೂ, ನಿನ್ನೆ ಜರುಗಿದ್ದೇ ಇನ್ನೊಂದು! ನಿಜಕ್ಕೂ ನಾನಂದುಕೊಂಡಿದ್ದಿರದ್ದು! ಅಥವಾ, ಎಂದೂ ಅಂದುಕೊಳ್ಳಲಾಗದ್ದು!!

ಹಾಸಿಗೆಯಿಂದೆದ್ದು ಶೌಚಕ್ಕೆ ಹೋಗಿ, ಅಷ್ಟಿಷ್ಟು ಮುಖ ತೊಳೆದು ರೂಮಿಗೆ ವಾಪಸ್ಸಾದೆ. ಚೆಲ್ಲಾಪಿಲ್ಲಿ ಇಳಿಬಿದ್ದಿದ್ದ ಕ್ವಿಲ್ಟನ್ನು ಹಾಗೇ ಮಡಿಚಿಟ್ಟು ಮೊಬೈಲೆತ್ತಿಕೊಂಡಾಗ ಕುಣಾಲನ ಇನ್ನೊಂದು ಮಿಸ್ಡ್ ಕಾಲ್ ಕಂಡುಬಂತು. ಬೇಜಾರಿನ ನಡುವೆಯೇ ವಾಪಸು ಡಯಲು ಹಚ್ಚಿದೆ. 'ಹೇ... ಸ್ಸಾರಿ... ಫೋನ್ ಬಂದಿದ್ದು ಕೇಳಿಸಲೇ ಇಲ್ಲ. ನಿನ್ನ ಮೆಸೇಜ್ ನೋಡಿದೆ. ನಾನೇ ಕಾಲ್ ಮಾಡೋಣ ಅಂತಿದ್ದೆ. ಅಷ್ಟರಲ್ಲಿ ನೀನೇ ಮಾಡಿದ್ದೀ...' ಅಂತಂದೆ.

'ಇಟ್ಸೋಕೆ, ಸರ್... ನಿಮ್ಮ ಫ್ಲೈಟ್ ಪೋಸ್ಟ್‌ಪೋನ್ ಮಾಡಿದರೆ ಆಗುತ್ತ ಅಂತ ಸತ್ಪತಿ ಸರ್ ಕೇಳಿದರು. ವಿಲ್ ಹ್ಯಾವ್ ಇಟ್ ಸ್ಕೆಡ್ಯೂಲ್ಡ್ ಫಾರ್ ದಿ ಆಫ್ಟರ್‌ನೂನ್...'

ಯಾಕಿರಬಹುದು? ಏನಿರಬಹುದು? ಈವರೆಗೆ ಕಂಡುಗೊತ್ತಿದ್ದಿರದ ನನ್ನ ಮೇಲೆ ಏಕಿಷ್ಟು ಉಸಾಬರಿ... ಎಂದೆಲ್ಲ ಯೋಚಿಸುತ್ತ, ಸರಿಯಾದ ಕಾರಣವೇ ತೋಚದೆ ಸೈಯಂದೆ.

'ಥಾಂಕ್ಯೂ, ಸರ್...' ಅಂತಂದ ಕುಣಾಲನ ಮಾತು ಹಿಮಾದ್ರಿ ಸತ್ಪತಿ ನನ್ನನ್ನು ಭೇಟಿ ಮಾಡಲಿಕ್ಕಿರುವುದರ ಬಗ್ಗೆ ಹೊರಳಿತು. 'ಕುಣಾಲ್... ನನ್ನ ಪ್ರೊಫೆಷನಲ್ ಫೀ ವಿಷಯವಾದರೆ ಆಮೇಲೂ ಮಾತಾಡಬಹುದು. ಯೂ ಮೇ ಡೂ ದಿ ಟ್ರಾನ್ಸ್‌ಫರ್ ಲೇಟರ್ ಆನ್...' ಅಂತಂದೆ.